**ಇಂದು:20-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ **:** ಶ್ರೀ ಎನ್.ಆರ್ ವಕೀಲರಿಂದ ವಾದಿಯ ಪರ**:**

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ನಾನು ನಿ.ಪಿ-16ಕ್ಕೆ ಸಾಕ್ಷಿದಾರ ಎಂದು ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ಈಗಾಗಲೇ ನಿ.ಪಿ-16(ಬಿ) ಎಂದು ಗುರುತಿಸಲಾಗಿದ್ದು, ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ನಿ.ಪಿ-16ರಲ್ಲಿ ಮೂರು ಕಡೆ ಸಾಕ್ಷಿದಾರ ಎಂದು ಸಹಿ ಮಾಡಿರುತ್ತೇನೆ. ನಾನು ನಿ.ಪಿ-16ರಲ್ಲಿ ಇರುವ ಷರಾಗೆ ಸಹ ಸಾಕ್ಷಿದಾರ ಎಂದು ಸಹಿ ಮಾಡಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-16(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ-16ರ ಮೇಲೆ 1ನೇ ಪ್ರತಿವಾದಿಯ ಹೆಬ್ಬಟ್ಟಿನ ಗುರುತು ಮತ್ತು ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಪ್ರತಿವಾದಿಯ ಪರ ವಕೀಲರು ಗೈರು ಹಾಜರು ಇದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**